## ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **05/2023** ಸಿ.ಡಬ್ಲ್ಯೂ **01** / ಪಿ.ಡಬ್ಲ್ಯೂ **02**

| | | |
|---|---|---|
| ಸಾಕ್ಷಿಯ ಹೆಸರು | - ಆಂಜನೇಯ್ಯ. ಬಿ | ದಿನಾಂಕ 20-01-2025 |
| ತಂದೆಯ ಹೆಸರು | - ಯಂಕಪ್ಪ | ರಂದು ಪ್ರಮಾಣ ವಚನ |
| ವಯಸ್ಸು | - 46 ವರ್ಷ | ಮಾಡಿಸಲಾಯಿತು. |
| ಉದ್ಯೋಗ | - ಅಬಕಾರಿ ಉಪನಿರೀಕ್ಷಕರು, ಅಬಕಾರಿ ಉಪವಿಭಾಗ, ಹೊಸಪೇಟೆ | |
| ವಾಸ ಸ್ಥಳ | - ಹೊಸಪೇಟೆ | |

### ಮುಂದುವರೆದ ಮುಖ್ಯ ವಿಚಾರಣೆ ಸಸಅ ರವರಿಂದ

* * * *

ನಾನು ಮಾರ್ಚ್-2021 ರಿಂದ ಫೆಬ್ರವರಿ-2022 ರವರೆಗೆ ಸಂಡೂರು ಅಬಕಾರಿ ಇಲಾಖೆಯಲ್ಲಿ ಅಬಕಾರಿ ನಿರೀಕ್ಷಕರೆಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿಯವರು ಕೋವಿಡ್-19 ಸಂಬಂಧ ದಿಃ 24-03-2020 ರಿಂದ 20-04-2020 ರವರೆಗೆ ಎಲ್ಲಾ ಮದ್ಯದ ಅಂಗಡಿಗಳನ್ನು ತೆರೆಯದಿರಲು ಆದೇಶ ಮಾಡಲಾಗಿತ್ತು. ಆದರೆ ದಿಃ 18-04-2020 ರಂದು ಮಾನ್ಯ ಜಿಲ್ಲಾಧಿಕಾರಿಗಳು ತಾರಾನಗರದಲ್ಲಿ ಇರುವ ರಾಘವೇಂದ್ರ ಎನ್ನುವವರು ಮದ್ಯದ ಅಂಗಡಿಯ ಸೀಲನ್ನು ತೆಗೆದಿರುವ ಬಗ್ಗೆ ಸಂಶಯ ಬಂದಿದ್ದರಿಂದ ಅಬಕಾರಿ ಉಪಾಯುಕ್ತರು, ಬಳ್ಳಾರಿಯವರಿಗೆ ಸದರಿ ವಿಷಯದ ಬಗ್ಗೆ ವರದಿಯನ್ನು ನೀಡುವ ಬಗ್ಗೆ ಆದೇಶ ಮಾಡಿದ್ದರು. ತದ ನಂತರ ಸದರಿ ಉಪಾಯುಕ್ತರು ನನಗೆ ಮತ್ತು ನಮ್ಮ ಇಲಾಖೆಯ ಉಪನಿರೀಕ್ಷಕರವರಿಗೆ ಘಟನಾ ಸ್ಥಳದಲ್ಲಿರುವ ವೈನ್ ಶಾಪ್ ನ್ನು ಪರಿಶೀಲಿಸಿ ವರದಿ ನೀಡುವಂತೆ ಆದೇಶಿಸಿದ್ದರು. ತದ ನಂತರ ಬೆಳಿಗ್ಗೆ 11-00 ಗಂಟೆಗೆ ತಹಶೀಲ್ದಾರ್, ಸಂಡೂರುರವರ ಬಳಿ ಹೋಗಿ ಸದರಿ ವಿಷಯ ತಿಳಿಸಿ ಕಂದಾಯ ನಿರೀಕ್ಷಕರು ವೀರೇಶ್ ರವರನ್ನು ಮತ್ತು ವೈದ್ಯಾಧಿಕಾರಿಗಳಾದ ಚಂದ್ರಪ್ಪರವರನ್ನು ಪಂಚರನ್ನಾಗಿ ಕರೆದುಕೊಂಡು ಸರ್ಕಾರಿ ವಾಹನದಲ್ಲಿ ಘಟನಾ ಸ್ಥಳಕ್ಕೆ ಬೆಳಿಗ್ಗೆ 11-45 ಗಂಟೆಗೆ ಹೋಗಿರುತ್ತೇವೆ. ಸದರಿ ವೈನ್ ಶಾಪ್ ನಡೆಸುತ್ತಿದ್ದ ಡಿ. ರಾಘವೇಂದ್ರವರನ್ನು ಘಟನಾ ಸ್ಥಳಕ್ಕೆ ಬರಲು ಸೂಚಿಸಿದೆವು ಆಗ ಅವರು ಹೊರಗಡೆ ಇದ್ದ ಕಾರಣ ಅವರ ತಮ್ಮ ಪ್ರಹ್ಲಾದ್ ರವರನ್ನು ಕಳುಹಿಸಿರುತ್ತಾರೆ. ತದ ನಂತರ ನಮ್ಮ ಸಮಕ್ಷಮ ಸದರಿಯವರು ವೈನ್ ಶಾಪ್ ನ್ನು ತೆಗೆದಿರುತ್ತಾರೆ ಆಗ ನಾವು ಅಲ್ಲಿ ಪಂಚರ ಸಮಕ್ಷಮ ಪಂಚನಾಮೆಯನ್ನು 11-45 ರಿಂದ 2-45 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿರುತ್ತೇವೆ. ಆಗ ಅಲ್ಲಿ ಲೆಕ್ಕದ ಪುಸ್ತಕದಲ್ಲಿ

ಬರೆದ ಮದ್ಯದ ಸಂಗ್ರಹಕ್ಕೆ ಮತ್ತು ಶಾಪ್ ನಲ್ಲಿರುವ ಮದ್ಯದ ದಾಸ್ತಾನುಗಳಿಗೆ ವ್ಯತ್ಯಾಸ ಕಂಡು ಬಂದಿರುತ್ತದೆ. ಆಗ ಅಲ್ಲಿ ಲೆಕ್ಕದ ಪುಸ್ತಕದಲ್ಲಿ ಒಟ್ಟು 365.430 ಲೀಟರ್ ಮದ್ಯ ನಮೂದು ಆಗಿರುತ್ತದೆ. ಆದರೆ ಮದ್ಯದ ಅಂಗಡಿಯಲ್ಲಿ 123.570 ಲೀಟರ್ ಮದ್ಯ ಇರುವುದು ಕಂಡು ಬಂದಿರುತ್ತದೆ. ಆದ್ದರಿಂದ ಲೆಕ್ಕದ ಪುಸ್ತಕದಲ್ಲಿರುವ ಮದ್ಯ ಮತ್ತು ಶಾಪ್ ನಲ್ಲಿರುವ ಮದ್ಯಕ್ಕೆ 846.860 ಲೀಟರ್ ವ್ಯತ್ಯಾಸ ಇರುವುದು ಕಂಡು ಬಂದಿರುತ್ತದೆ. ಲೆಕ್ಕದ ಪುಸ್ತಕದಲ್ಲಿ ಒಟ್ಟು 570.800 ಲೀಟರ್ ಬಿಯರ್ ನಮೂದು ಆಗಿತ್ತು. ಆದರೆ ಸನ್ನದಿನಲ್ಲಿ ಒಟ್ಟು 329.160 ಲೀಟರ್ ಇರುವುದು ಕಂಡುಬಂದಿರುತ್ತದೆ. ಅದ್ದರಿಂದ ಒಟ್ಟು ವ್ಯತ್ಯಾಸ 241.640 ಲೀಟರ್ ಇರುವುದು ಕಂಡು ಬಂದಿರುತ್ತದೆ. ತದ ನಂತರ ಮದ್ಯದ ಅಂಗಡಿಯನ್ನು ಪಂಚರ ಸಮಕ್ಷಮ ಮತ್ತೊಂದು ಬೀಗವನ್ನು ಹಾಕಿ ತದ ನಂತರ ಘಟನಾ ಸ್ಥಳದಲ್ಲಿದ್ದ ವೈನ್ ಶಾಪ್ ನಲ್ಲಿ ಮದ್ಯದ ವ್ಯತ್ಯಾಸ ಕಂಡು ಬಂದ ಕಾರಣ ಇಲಾಖೆಗೆ ಬಂದು ದೂರನ್ನು ದಾಖಲಿಸಿ ಪ್ರಕರಣ ದಾಖಲಿಸಿಕೊಂಡಿರುತ್ತೇನೆ. ತದ ನಂತರ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾ.ಸಾ 7 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿ ನಿ.ಪಿ 1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿ.ಪಿ 1-ಬಿ ಎಂದು ಗುರುತಿಸಲಾಯಿತು. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ 2-ಎ ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವ ಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ 3-ಎ ಎಂದು ಗುರುತಿಸಲಾಯಿತು.

(ಮಾನ್ಯ ಸಸಅ ರವರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

**ಸಿ.ಜೆ ಮತ್ತು ಪ್ರ.ದ.ನ್ಯಾ.ದಂ., ಸಂಡೂರು.**